ಬಾಲಿವುಡ್

# ಸೋಹಾ ಮೇಲೆ ಅಮ್ಮನ ಸಿಟ್ಟು



ಸೈಫ್ ಅಲಿ ಖಾನ್ ಎರಡನೇ ಮದುವೆ ಆಗಿ ಅಕ್ಟೋಬರ್ 12ಕ್ಕೆ ಸರಿಯಾಗಿ ಒಂದು ವರ್ಷ. ಅಮೃತಾ ಸಿಂಗ್ ಜೊತೆಗಿನ ಸುಮಾರು 12 ವರ್ಷದ ದಾಂಪತ್ಯ ಬದುಕನ್ನು ಅಂತ್ಯಗೊಳಿಸಿದ್ದ ಸೈಫ್, ಕರೀನಾ ಕಪೂರ್‌ಗಾಗಿ ಎರಡು ಮಕ್ಕಳನ್ನೂ ತ್ಯಜಿಸಿದ್ದು ಈಗ ಇತಿಹಾಸ. ಮರಿ ನವಾಬ ಇಷ್ಟೆಲ್ಲಾ ಸುದ್ದಿ ಮಾಡಿದ್ದರೂ ಅಮ್ಮ ಶರ್ಮಿಳಾ ಟಾಗೋರ್ ಚಿಂತೆಗೆ ಒಳಗಾಗಿರಲಿಲ್ಲ. ಆದರೆ ಮಗಳು ಸೋಹಾ ವಿಚಾರದಲ್ಲಿ ಮಾತ್ರ ಇಷ್ಟು ದಿನ ತಾಳ್ಮೆಯಿಂದಿದ್ದ ಅಮ್ಮ ಕೋಪಗೊಂಡಿದ್ದಾರಂತೆ.

ಮೂವತ್ತೈದರ ಹರೆಯಕ್ಕೆ ಕಾಲಿಟ್ಟರೂ ಮದುವೆಯಾಗದೆ ಇನ್ನೂ ಚಿಕ್ಕ ಹುಡುಗಿಯಂತೆ ಆಡುತ್ತಿರುವ ಮಗಳನ್ನು ನೋಡಿದಾಗ ಯಾವ ಅಮ್ಮ ತಾನೆ ಕೋಪಗೊಳ್ಳುವುದಿಲ್ಲ? ಹಾಗೆಂದು, ಸೋಹಾ ಒಂಟಿಯಲ್ಲ. ನಟ ಕುನಾಲ್ ಖೇಮು ಜೊತೆ 'ಲಿವ್ ಇನ್ ರಿಲೇಷನ್‌ಶಿಪ್'ನಲ್ಲಿ ಬಾಳ್ವೆ ನಡೆಸುತ್ತಿರುವುದು ಗುಟ್ಟೇನೂ ಅಲ್ಲ. ಮೂರು ವರ್ಷದಿಂದಲೂ ಜೊತೆಗೆ ಅಡ್ಡಾಡುತ್ತಿರುವ ಈ ಜೋಡಿಯ ಬಗ್ಗೆ ಅಮ್ಮ ಎಂದೂ ಆಕ್ಷೇಪವೆತ್ತಿದವರಲ್ಲ. ಆದರೆ ಅಮ್ಮನ ಸಹನೆಗೂ ಒಂದು ಮಿತಿಯಿದೆಯಲ್ಲ? 'ಎಷ್ಟು ದಿನಾ ಎಂದು ನಿಮ್ಮನ್ನು ಹೀಗೆ ನೋಡುವುದು? ಈ ಹೊತ್ತಿಗೆ ನಿನಗೆ ಮದುವೆಯಾಗಿ ಮೂರು ಮಕ್ಕಳಿರಬೇಕಿತ್ತು. ಆದರೆ ನೀವೇನು ಮಾಡುತ್ತಿದ್ದೀರಿ?' ಎಂದು ಶರ್ಮಿಳಾ ಮಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರಂತೆ.

ಹೀಗೆ ಅಮ್ಮ ಬೈದದ್ದನ್ನು ಸೋಹಾ ಮುಚ್ಚುಮರೆಯಿಲ್ಲದೆ ಪತ್ರಕರ್ತರ ಬಳಿ ಹಂಚಿಕೊಂಡಿದ್ದಾರೆ. 'ಹೀಗೇ ಮುಂದುವರೆದರೆ ಮುಂದಿನ 10–20 ವರ್ಷಗಳಲ್ಲಿ ನಾನು ಏನು ಮಾಡುತ್ತೇನೋ ಎಂಬ ಆತಂಕ ಅಮ್ಮನದು' ಎನ್ನುತ್ತಾಳೆ ಸೋಹಾ. 'ಆದರೆ ನಾನು ಈಗಿರುವ ರೀತಿಯೇ ಹೆಚ್ಚು ಖುಷಿ ಕೊಡುತ್ತಿದೆ. ನಾನು ಮತ್ತು ಖೇಮು ಮೂರು ವರ್ಷ ದಿಂದ ಒಟ್ಟಿಗೆ ಇರುವುದನ್ನು ನೋಡಿ ಜನರಿಗೆ ಬೋರಾಗಿರಬೇಕು. ಅದಕ್ಕೆ ಇಬ್ಬರೂ ಯಾವಾಗ ಬೇರೆಯಾಗುತ್ತಾರೋ ಎಂದು ಕೆಲವರು ಕಾಯುತ್ತಿದ್ದಾರೆ' ಎನ್ನುವುದು ಆಕೆಯ ಕಿಡಿನುಡಿ.

'ನಾವಿಬ್ಬರೂ ಒಟ್ಟಿಗೆ ವಾಸಿಸುತ್ತಿದ್ದೇವೆ ಎಂಬ ದೊಡ್ಡ ಸುದ್ದಿಯನ್ನು ಈ ವರ್ಷ ನೀಡಿದ್ದೇನೆ. ಮತ್ತೊಂದು ಸುದ್ದಿಗಾಗಿ ಮುಂದಿನ ವರ್ಷದವರೆಗೆ ಕಾಯಿರಿ' ಎಂದೂ ಹೇಳುವ ಮೂಲಕ ಸೋಹಾ, ಬಾಲಿವುಡ್‌ನ ಇತರ ಸುದ್ದಿ ಸುಬ್ಬಕ್ಕಂದಿರ ನಿದ್ದೆ ಹಾರಿಹೋಗುವಂತೆ ಮಾಡಿದ್ದಾಳೆ.

■ ಅಮಿ


